# ***Form No.4.***

# ***Deposition Sheet( R.P.52)***

ಹಿರಿಯ ಸಿವಿಲ್ ನ್ಯಾಯಾಧೀಶರ ನ್ಯಾಯಾಲಯ ಮತ್ತು ಹೆಚ್ಚುವರಿ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ಕಾರ್ಕಳ.

**CC 217/2025**

**CW-3**

**PW-2**

| | | |
|---|---|---|
| ಸಾಕ್ಷಿಯ ಹೆಸರು | ಃ | ಜಾನ್ ಟೆಲ್ಲಿಸ್ |
| ತಂದೆ ಹೆಸರು | ಃ | ಜಾಕೊಬ್ ಟೆಲ್ಲಿಸ್ |
| ಪ್ರಾಯ | ಃ | 57 ವರ್ಷ |
| ಉದ್ಯೋಗ | ಃ | ಕೃಷಿ |
| ವಾಸ | ಃ | ಅಜೆಕಾರು |

ದಿನಾಂಕ **: 26.12.2025** ರಂದು ಪಿಡಬ್ಲ್ಯೂ - 2 /ಸಿಡಬ್ಲ್ಯೂ - 3 ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಮಾಡಿಸಲಾಯಿತು.

ಮುಖ್ಯ ವಿಚಾರಣೆಃ ಶ್ರೀ ಹಿರಿಯ ಸ.ಸ.ಅ. ರವರಿಂದಃ

ಮೃತ ಜಯಲಕ್ಷ್ಮಿ ನಾಯಕ್ ರವರ ಪರಿಚಯವಿದೆ. ಅವರು ಅಪಘಾತದಿಂದ ಮರಣ ಹೊಂದಿರುತ್ತಾರೆ. ನಾನು ಅಪಘಾತವನ್ನು ನೋಡಿರುವುದಿಲ್ಲ. ಅಪಘಾತವನ್ನು ನೋಡಿದ್ದೇನೆ ಎಂದು ಪೋಲೀಸರ ಮುಂದೆ ಯಾವುದೇ ಹೇಳಿಕೆ

CC 217/2025
CW3
PW2

ನೀಡಿರುವುದಿಲ್ಲ. ಆರೋಪಿಯ ಪರಿಚಯವಿದೆ. ಈ ಪ್ರಕರಣದಲ್ಲಿ ಯಾವುದೇ ಹೇಳಿಕೆ ಅಥವಾ ಮರುಹೇಳಿಕೆಯನ್ನು ನೀಡಿರುವುದಿಲ್ಲ.

ಈ ಹಂತದಲ್ಲಿ ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಬೇಕು ಎಂದು ಹಿರಿಯ.ಸ.ಸ.ಅ. ರವರು ಕೋರಿದ್ದು, ಪಾಟೀ ಸವಾಲಿಗೆ ಅನುಮತಿ ನೀಡಲಾಯಿತು.

<u>ಪಾಟೀ ಸವಾಲುಃ</u> ಹಿರಿಯ ಸ.ಸ.ಅ. ರವರಿಂದಃ

ದಿಃ 27.02.2025 ರಂದು ಸಂಜೆ 7.15 ರ ಸಮಯದಲ್ಲಿ ನಾನು ನನ್ನ ಮನೆಯ ಬಳಿ ಇರುವಾಗ ಮೃತ ಜಯಲಕ್ಷ್ಮಿಯವರು ಅವರ ಮನೆಯಿಂದ ಕೈಕಂಬ ಜಂಕ್ಷನ್ ಕಡೆಗೆ ರಸ್ತೆಯ ಎಡಬದಿಯಲ್ಲಿ ನಡೆದುಕೊಂಡು ಹೋಗುತ್ತಿದ್ದಾಗ, ಅವರ ಹಿಂದಿನಿಂದ ಬಂದಂತಹ ಆರೋಪಿಯು ತನ್ನ ವಾಹನ ಸಂಖ್ಯೆ ಕೆಎ – 20- ಇವೈ - 7550 ಇದನ್ನು ಅತೀ ವೇಗೆ ಹಾಗೂ ನಿರ್ಲಕ್ಷತನದಿಂದ ಚಲಾಯಿಸಿ, ನಡೆದುಕೊಂಡು ಹೋಗುತ್ತಿದ್ದ ಜಯಲಕ್ಷಿಯವರಿಗೆ ಅಪಘಾತಪಡಿಸಿರುತ್ತಾರೆ ಎಂದರೆ ಸರಿಯಲ್ಲ. ಅವರನ್ನು ಚಾಸಾ 1 ರವರು ಚಿಕಿತ್ಸೆಗೆ ಕರೆದುಕೊಂಡು ಹೋಗಿರುತ್ತಾರೆ ಎಂದರೆ ಸರಿಯಲ್ಲ. ಇದರ ಬಗ್ಗೆ ನಾನು ದಿಃ 14.03.2025 ರಂದು ಈಗ ನನಗೆ ಓದಿ ಹೇಳಿದಂತೆ ಪೋಲೀಸರ ಮುಂದೆ ಹೇಳಿಕೆಯನ್ನು ನೀಡಿರುತ್ತೇನೆ ಎಂದರೆ ಸರಿಯಲ್ಲ. ನನ್ನ ಹೇಳಿಕೆಯ ಪ್ರತಿಯನ್ನು ನಿಪಿ - 3 ಎಂದು ಗುರುತಿಸಲಾಯಿತು. ಸದರಿ ಜಯಲಕ್ಷ್ಮಿಯವರು

**CC 217/2025**
**CW3**
**PW2**

ಚಿಕಿತ್ಸೆ ಫಲಕಾರಿಯಾಗದೆ ದಿಃ 01.04.2025 ರಂದು ಆಸ್ಪತ್ರೆಯಲ್ಲಿ ಮರಣ ಹೊಂದಿರುತ್ತಾರೆ ಎಂದು ತಿಳಿದು, ಅದೇ ದಿನ ನಾನು ಈಗ ನನಗೆ ಓದಿ ಹೇಳಿದಂತೆ ಪೋಲೀಸರ ಮುಂದೆ ಮರುಹೇಳಿಕೆ ನೀಡಿದ್ದೆನೆ ಎಂದರೆ ಸರಿಯಲ್ಲ. ನನ್ನ ಮರುಹೇಳಿಕೆಯನ್ನು ನಿಪಿ - 4 ಎಂದು ಗುರುತಿಸಲಾಯಿತು. ಆರೋಪಿ ನನಗೆ ಪರಿಚಯವಿರುವ ಕಾರಣ, ಅಪಘಾತವನ್ನು ನೋಡಿದ್ದರೂ ಸಹಾ ಅವರಿಗೆ ಸಹಾಯ ಮಾಡುವ ಉದ್ದೇಶದಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದ ಇರುವುದಿಲ್ಲ.

(ಸಾಕ್ಷಿಯ ಹೇಳಿಕೆಯಂತೆ ನಾನು ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನ ನೀಡಿದ್ದು, ಅದರಂತೆ ಬೆರಳಚ್ಚು ಮಾಡಲಾಯಿತು).

ಓ ಹೇ ಕೇ ಸರಿ ಇದೆ.

Sd/-

ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಎಸಿಜೆಎಂ.,

ಕಾರ್ಕಳ.